# ಆಹಾ ಸುದ್ದಿ!

★ ಸಸಿತೋಟ



ಚೀನಾದಲ್ಲಿ ಜಾದೂಗಾರ ಲೀ ಕ್ಸಿ ಹಾಗೂ ಆತನ ಸಂಗಾತಿ ಬೀದಿಯಲ್ಲೇ ಜಾದೂ ಪ್ರದರ್ಶನ ನೀಡಲು ಹೊರಟಿದ್ದಾರೆ. ಯುವಜನರಲ್ಲಿ ಆರೋಗ್ಯಕರ ಪ್ರೀತಿ ಮತ್ತು ಮದುವೆ ಬಗ್ಗೆ ಜಾಗೃತಿ ಮೂಡಿಸಲು ಬಸ್ ಹೊರಗಡೆ ಇಳಿಬಿದ್ದಂತೆ ಕಾಣುವ ಈ ಜಾದೂ ಪ್ರದರ್ಶಿಸಿದರಂತೆ. ಪ್ರೀತಿ, ಪ್ರೇಮದಲ್ಲೇನೋ ಜಾದೂ ನಡೆಯಬಹುದು, ಆದರೆ ಮದುವೆಯಲ್ಲಿ?



ಥಾಯ್ಲೆಂಡ್‌ನ ಫುಕೆಟ್‌ನಲ್ಲಿ ಚೀನೀಯರ ಸಸ್ಯಾಹಾರಿ ವಾರಾಚರಣೆ ಇತ್ತೀಚೆಗೆ ನಡೆಯಿತು. ಅದರ ಅಂಗವಾಗಿ ಮಾಂಸಾಹಾರ, ಮದ್ಯ ಸೇವನೆ ತ್ಯಜಿಸಿ, ಈ ರೀತಿ ಕೆನ್ನೆ ಮೂಲಕ ಚೂರಿಗಳನ್ನು ಸಿಗಿಸಿಕೊಂಡು ಹರಕೆ ತೀರಿಸುವ ಸಂಪ್ರದಾಯವಿದೆಯಂತೆ. ಸಸ್ಯಾಹಾರ ಆಚರಣೆಗೆ ರಕ್ತದ ತರ್ಪಣ.

ಡೆನ್ಮಾರ್ಕ್‌ನ ಟ್ರಾವೆಲ್ ಕಂಪೆನಿಯೊಂದು ‘ಮಕ್ಕಳನ್ನು ಪ್ರವಾಸಕ್ಕೆ ಕಳಿಸಿ- 9 ತಿಂಗಳಲ್ಲಿ ಮೊಮ್ಮಗು ಪಡೆಯಿರಿ’ ಎಂದು ಸ್ಲೋಗನ್ ಇಟ್ಟುಕೊಂಡು ಪೋಷಕರಿಗೆ ಮಗ- ಸೊಸೆ, ಮಗಳು- ಅಳಿಯನನ್ನು ಪ್ರವಾಸಕ್ಕೆ ಕಳಿಸುವಂತೆ ಪ್ರಚಾರ ಮಾಡುತ್ತಿದೆಯಂತೆ. ಡೆನ್ಮಾರ್ಕ್‌ನಲ್ಲಿ ಜನನ ಸಂಖ್ಯೆ ತೀರಾ ಕುಸಿದಿದ್ದು, ಈಗ ಮಕ್ಕಳಿಗಾಗಿ ಮಾತ್ರವಲ್ಲ, ಮೊಮ್ಮಕ್ಕಳಿಗಾಗಿಯೂ ಹಣ ಉಳಿತಾಯ ಮಾಡುವ ಪರಿಸ್ಥಿತಿ ತಂದೊಡ್ಡಿದೆ ಈ ಕಂಪೆನಿ.

ಫ್ಲಾರಿಡಾದಲ್ಲಿ ಮದ್ಯ ಸೇವಿಸಿ ಕಾರನ್ನು ಅಪಘಾತ ಮಾಡಿ ಬಂಧನಕ್ಕೊಳಗಾದವನೊಬ್ಬ ಕೋರ್ಟ್‌ನಲ್ಲಿ ಹೇಳಿಕೆ ನೀಡಿದನಂತೆ ಕಾರು ಚಾಲನೆ ಮಾಡಿದ್ದು ತಾನಲ್ಲ, ತನ್ನ ನಾಯಿ ಎಂದು. ಅಷ್ಟೇ ಅಲ್ಲ, ತಾನೇ ಚಾಲನೆ ಮಾಡಬೇಕೆಂದು ಕಾರಿನ ಹಿಂದೆ ಓಡುತ್ತಿದ್ದೆ, ಆದರೂ ನಾಯಿ ಕಾರನ್ನು ನಿಲ್ಲಿಸಲಿಲ್ಲ ಎಂದನಂತೆ. ಈಗ ಪೊಲೀಸರು ನಾಯಿಯ ಲೈಸನ್ಸ್ ಎಲ್ಲಿದೆ, ಅದು ಕುಡಿದಿತ್ತೇ ಎಂದು ತನಿಖೆ ನಡೆಸಲು ಶುರು ಮಾಡಿದ್ದಾರೋ ಎಂಬುದು ಗೊತ್ತಾಗಿಲ್ಲ.



ಕಲಾವಿದರು ಹೊರಾಂಗಣದಲ್ಲಿ ಇನ್‌ಸ್ಟಾಲೇಶನ್ ಕಲೆಯನ್ನು ಪ್ರದರ್ಶಿಸುವ ಟ್ರೆಂಡ್ ಜಾಸ್ತಿಯಾಗಿದೆ. ಈ ಬ್ರಿಟಿಷ್ ಕಲಾವಿದೆ ಮಿಲಿ ಬ್ರೌನ್ ಲಂಡನ್‌ನಲ್ಲಿ ತಾನೇ ಕಲೆಯ ವಸ್ತುವಾಗಿ ಅಭಿಮಾನಿಗಳನ್ನು ಸೆಳೆಯುವ ಸಾಹಸಕ್ಕೆ ಕೈ ಹಾಕಿದ್ದಾಳಂತೆ. ಪ್ರದರ್ಶನದ ಕೊನೆಯ ದಿನದ ಹರಾಜು ಪ್ರಕ್ರಿಯೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಆಸಕ್ತರು ಕಾದು ಕುಳಿತಿರಬಹುದು.



ಕೊಸೊವೊ ಪಾರ್ಲಿಮೆಂಟ್‌ನಲ್ಲಿ ವಿರೋಧ ಪಕ್ಷಗಳ ಪ್ರತಿಭಟನೆ ಎಷ್ಟು ತಾರಕಕ್ಕೇರಿತೆಂದರೆ ಅವರೇ ಆಡಳಿತ ಪಕ್ಷದವರ ಮೇಲೆ ಟಿಯರ್ ಗ್ಯಾಸ್ ಪ್ರಯೋಗಿಸಿದರಂತೆ. ಆಡಳಿತ ಕೈಗೆ ಸಿಗುವಾಗ ಮತದಾರರ ಎದುರು ಕಣ್ಣೀರು ಸುರಿಸಬೇಕು, ಸಿಕ್ಕ ನಂತರ ವಿರೋಧ ಪಕ್ಷದವರ ಮುಂದೆ ಕಣ್ಣು ಒದ್ದೆ ಮಾಡಿಕೊಳ್ಳುವ ಕರ್ಮ ಆಡಳಿತ ಪಕ್ಷಕ್ಕೆ.